**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆಃ– 246/2023**

| | | | |
|---|---|---|---|
| **ಸಾಕ್ಷಿದಾರನ ಹೆಸರು** | : ಮೊಹಮ್ಮದ್ ಕಯ್ಯುಮ್ ಪಾಷ | | **ಪಿ.ಡಬ್ಲ್ಯೂಃ**– 15 |
| **ತಂದೆಯ ಹೆಸರು** | : ಲೇಟ್ ಮೊಹಮ್ಮದ್ ದಸ್ತಗೀರ್ | | **ಸಿ.ಡಬ್ಲ್ಯೂಃ**– 29 |
| **ವಯಸ್ಸು** | : 49 ವರ್ಷ | | |
| **ಉದ್ಯೋಗ** | : ಹೆಚ್.ಸಿ, ಕೆ.ಆರ್ ಸಂಚಾರಿ ಪೊಲೀಸ್ ಠಾಣೆ, ಮೈಸೂರು | | |
| **ವಾಸಸ್ಥಳ** | : ರಾಜೀವ್ ನಗರ, ಮೈಸೂರು | | |

**ಸಾಕ್ಷಿಯನ್ನು ಈ ದಿನ ದಿಃ09.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನಾನು 2018 ರಿಂದ 2025 ಜುಲೈವರೆಗೆ ಮಂಡಿ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ–14.12.2022 ರಂದು ನಮ್ಮ ಠಾಣಾ ಮೊಕದ್ದಮೆ ಸಂಖ್ಯೆ– 140/2022 ರಲ್ಲಿ ಆರೋಪಿಗಳನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಚಾ.ಸಾಃ32 ರವರು ನಮ್ಮನ್ನು ಮತ್ತು ನಮ್ಮ ಠಾಣಾ ಸಿಬ್ಬಂದಿಗಳಾದ ರಾಜೇಂದ್ರ, ಕರಿಯಪ್ಪರವರನ್ನು ನೇಮಕ ಮಾಡಿ ಸೂಚಿಸಿರುತ್ತಾರೆ. ನಾವು ಆರೋಪಿಗಳನ್ನು ಪತ್ತೆ ಮಾಡಲು ಲಷ್ಕರ್ ಮೊಹಲ್ಲಾ ಮತ್ತು ಮಂಡಿ ಮೊಹಲ್ಲಾಗಳಲ್ಲಿ ಗಸ್ತು ಮಾಡಿ, ಬಾತ್ಮೀದಾರರಿಂದ ಮಾಹಿತಿ ಪಡೆದು ಮದ್ಯಾಹ್ನ 2.30 ಗಂಟೆಗೆ ದೇವರಾಜ ಮೊಹಲ್ಲಾ, ಟೌನ್ ಹಾಲ್ ಬಳಿ ಇಬ್ಬರು

ಆರೋಪಿಗಳು ಪತ್ತೆ ಆಗಿದ್ದು, ಅವರನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿರುತ್ತೇನೆ. ಅದರಲ್ಲಿ ಒಬ್ಬ ತಮ್ಮ ಹೆಸರು ರೆಹಮತ್ತುಲ್ಲಾ ಎಂದು ಆತ ಮೂಲತಃ ರಾಮನಗರದವನಾಗಿರುತ್ತಾನೆ. ಇನ್ನೊಬ್ಬ ತಮ್ಮ ಹೆಸರು ಗೋಪಾಲ ಅಲಿಯಾಸ್ ಗೋಪಿ ಆತ ಕುಂಬಾರಕೊಪ್ಪಲು ವಾಸಿ ಆಗಿದ್ದು ಅವರನ್ನು ವಶಕ್ಕೆ ಪಡೆದುಕೊಂಡು ಅವರ ಬಳಿ ಒಂದು ಪ್ಯಾಸೆಂಜರ್ ಆಟೋ ಇದ್ದು, ಅದನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಹಾಜರಾಗಿ ಪಿ.ಎಸ್.ಐರವರ ಮುಂದೆ ವರದಿಯ ಜೊತೆಗೆ ಹಾಜರುಪಡಿಸಿರುತ್ತೇವೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–26 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–26(ಎ) ಎಂದು ಗುರುತಿಸಲಾಯಿತು. ಆರೋಪಿತರ ಜೊತೆಗೆ ವಶಕ್ಕೆ ಪಡೆದುಕೊಂಡ ಆಟೋವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಶಾನೆ ಪಿ–14 ರಲ್ಲಿರುವ ಫೋಟೋದಲ್ಲಿ ಆಟೋವನ್ನು ನೋಡಿ ಗುರುತಿಸಿರುತ್ತಾರೆ.

3. ನಂತರ ಮಾರನೇ ದಿನ ದಿಃ– 15.12.2022 ರಂದು ಚಾ.ಸಾಃ32 ರವರು ಪ್ರಕರಣದ ಇನ್ನೊಬ್ಬ ಆರೋಪಿಯಾದ ಅಕ್ರಲ್ ಪಾಷರವರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ನನ್ನನ್ನು, ರಾಜೇಂದ್ರ ಮತ್ತು ಕರಿಯಪ್ಪರವರನ್ನು ನೇಮಿಸಿರುತ್ತಾರೆ. ನಂತರ ನಾವು ಮಂಡಿ ಮೊಹಲ್ಲಾ ಮತ್ತು ಲಷ್ಕರ್ ಮೊಹಲ್ಲಾ ಗಸ್ತು ಮಾಡಿ ಸಂಜೆ 5.30 ರ ಸುಮಾರಿಗೆ ಬಾತ್ಮಿದಾರರಿಂದ ಮಾಹಿತಿ ಪಡೆದು ದೇವರಾಜ ಮೊಹಲ್ಲಾ, ದಾಸಪ್ಪ ಸರ್ಕಲ್ ಬಳಿ ಆರೋಪಿಯನ್ನು ಪತ್ತೆ ಮಾಡಿ ಆತನನ್ನು ವಿಚಾರಿಸಿದಾಗ ಆತನ ಹೆಸರು ಅಕ್ರಲ್ ಪಾಷ ಎಂದು ಆತ ಗೌಸಿಯಾನಗರದ ವಾಸಿ ಎಂದು ತಿಳಿಸಿದ್ದು, ಆತನನ್ನು ವಶಕ್ಕೆ ಪಡೆದು ಪಿ.ಎಸ್.ಐ ರವರ ಮುಂದೆ ವರದಿಯ ಜೊತೆಗೆ 6 ಗಂಟೆ ಸುಮಾರಿಗೆ

ಹಾಜರುಪಡಿಸಿರುತ್ತೇವೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–27 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–27(ಎ) ಎಂದು ಗುರುತಿಸಲಾಯಿತು. ಸದರಿ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

**4.** ದಿಃ– **14.12.2022** ರಂದು ನಾನು ಹಗಲು ಕರ್ತವ್ಯದಲ್ಲಿ ಇದ್ದೆನು. ಚಾ.ಸಾಃ32 ರವರು ನನಗೆ ಲಿಖಿತವಾದ ಆದೇಶ ಅಥವಾ ಜ್ಞಾಪನ ನೀಡಿರುವುದಿಲ್ಲ. ಮೌಖಿಕವಾಗಿ ತಿಳಿಸಿರುತ್ತಾರೆ. ಆರೋಪಿತರ ಪತ್ತೆಗೆ ನೇಮಿಸುವಾಗ ಚಹರೆ, ಗುರುತು ಅಥವಾ ಫೋಟೋಗಳನ್ನು ನೀಡಿರುತ್ತಾರೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆ ದಿನ ನಾವು ಠಾಣೆಯಿಂದ ಬೆಳಿಗ್ಗೆ 9 ಗಂಟೆಗೆ ಹೊರಟಿರುತ್ತೇವೆ. ನಾವು ಮೊದಲಿಗೆ ಮಂಡಿ ಮೊಹಲ್ಲಾ, ಗುಮ್ ನಮ್ ಷಾ ವಲಿ ಗುಡ್ಡ, ಲಷ್ಕರ್ ಮೊಹಲ್ಲಾದಲ್ಲಿ ಗಸ್ತು ಮಾಡಿರುತ್ತೇವೆ. ಯಾವ–ಯಾವ ಸ್ಥಳಗಳಿಗೆ ಬೇಟಿ ನೀಡಿರುತ್ತೇವೆ ಎಂದು ಡೈರಿಯಲ್ಲಿ ನಮೂದಿಸಿ ಅದನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೀರಿಯೇ? ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**5.** 1 ಮತ್ತು 2 ನೇ ಆರೋಪಿತರನ್ನು ಯಾರನ್ನು ಎಲ್ಲಿ ವಶಕ್ಕೆ ಪಡೆದುಕೊಂಡಿರುತ್ತೀರಿ? ಎಂದರೆ ಸಾಕ್ಷಿಯು ದೇವರಾಜ ಮೊಹಲ್ಲಾದ ಟೌನ್ ಹಾಲ್ ಬಳಿ ವಶಕ್ಕೆ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಟೌನ್ ಹಾಲ್ ಮೈಸೂರಿನ ಮಧ್ಯಭಾಗದಲ್ಲಿರುತ್ತದೆ ಎಂದರೆ ಸರಿ. ಅಲ್ಲಿ ಯಾವಾಗಲೂ ಸಾರ್ವಜನಿಕರು ಮತ್ತು

ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಟೌನ್ ಹಾಲಿನ ಯಾವ ಭಾಗದಲ್ಲಿ ಆರೋಪಿತರನ್ನು ವಶಕ್ಕೆ ಪಡೆದುಕೊಂಡಿರುತ್ತೀರಿ? ಎಂದರೆ ಸಾಕ್ಷಿ ಟೌನ್ ಹಾಲಿನ ಆವರಣದಲ್ಲಿ ವಶಕ್ಕೆ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಟೌನ್ ಹಾಲ್ 2 ಎಕರೆಯಷ್ಟು ದೊಡ್ಡ ಸ್ಥಳವಾಗಿರುತ್ತದೆ ಎಂದರೆ ಸರಿ. ಟೌನ್ ಹಾಲ್ ನಲ್ಲಿ ಹಲವಾರು ಸಾರ್ವಜನಿಕರು ಇರುತ್ತಾರೆ ಎಂದರೆ ಸರಿ. ಆ ಸ್ಥಳದಲ್ಲಿ ಆರೋಪಿತರನ್ನು ವಶಕ್ಕೆ ಪಡೆಯುವಾಗ ಸಾರ್ವಜನಿಕರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೀರಿಯೇ? ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿತರನ್ನು ವಶಕ್ಕೆ ಪಡೆಯುವ ಕಾಲಕ್ಕೆ ಆಟೋ ಎಲ್ಲಿತ್ತು ಎಂದರೆ ಸಾಕ್ಷಿ ಆಟೋವನ್ನು ಪಕ್ಕಕ್ಕೆ ನಿಲ್ಲಿಸಲಾಗಿತ್ತು ಎಂದು ನುಡಿಯುತ್ತಾರೆ. ಟೌನ್ ಹಾಲ್ ಒಳಗಡೆ ಆಟೋಗಳಿಗೆ ಪ್ರವೇಶ ಇರುವುದಿಲ್ಲ ಎಂದರೆ ಸರಿ.

**6.** ಆರೋಪಿ 1 ಮತ್ತು 2 ರವರನ್ನು ನಿಶಾನೆ ಪಿ–26ರ ಪ್ರಕಾರ ವಶಕ್ಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಟೋ ಸಮೇತ ಆರೋಪಿತರನ್ನು ವಶಕ್ಕೆ ಪಡೆದಿರುತ್ತೇನೆ ಎಂದು ಹೇಳಿದ್ದು, ಆರೋಪಿಗಳಿಗೆ ಮತ್ತು ಆಟೋಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**